**ದಿನಾಂಕಃ 24-07-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀಸವಾಲುಃ ಪ್ರತಿವಾದಿ ಪರ ಕೆ ಜೆ ಡಿ ವಕೀಲರಿಂದಃ**

ಕೆಂಪಮ್ಮನವರು ಆರ್ ಎ ಸಂ. 111/1998-99 ರಲ್ಲಿ ಡಿ ಸಿ ನ್ಯಾಯಾಲಯದಲ್ಲಿ ಒಂದು ಪ್ರಕರಣವನ್ನು ದಾಖಲಿಸಿರುತ್ತಾರೆ ಈ ಬಗ್ಗೆ ನಿಮಗೆ ಗೊತ್ತಿದೆಯೋ ಇಲ್ಲವೋ ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಡಿ ಸಿ ನ್ಯಾಯಾಲಯದಲ್ಲಿ ಕೆಂಪಮ್ಮನ ವಿರುದ್ಧವಾಗಿ ಆಗಿರುತ್ತದೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಎ ಸಿ ನ್ಯಾಯಾಲಯದಲ್ಲಿ ನಮ್ಮ ಪರವಾಗಿ ಆಗಿರುತತದೆ. ಎ ಸಿ ನ್ಯಾಯಾಲಯದ ಆದೇಶದ ಮೇಲೆ ಡಿ ಸಿ ನ್ಯಾಯಾಲಯದಲ್ಲಿ ತಡೆಯಾಜ್ಞೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕೆಂಪಮ್ಮನಿಗೆ ಮಂಜೂರಾಗಿರುವ ಆಸ್ತಿಯನ್ನು ರದ್ದುಗೊಳಿಸಿರುವ ಕಾರಣ ದಾವಾ ಸ್ವತ್ತಿನಲ್ಲಿ ಹಕ್ಕೇ ಇರುವುದಿಲ್ಲ ಎಂದರೆ ಸರಿಯಲ್ಲ. ಕೆಂಪಮ್ಮನ ಹೆಸರಿಗೆ ಮಂಜೂರಾದ ಆಸ್ತಿಯನ್ನು ರದ್ದುಗೊಳಿಸಿದ್ದ ಆದೇಶದ ಮೇಲೆ ಕೆಂಪಮ್ಮ ಮೇಲ್ಮನವಿ ಸಲ್ಲಿಸಿದ್ದರೆ ಎಂದರೆ ನಮಗೆ ಬರೆದುಕೊಡುವ ಮುಂಚೆ ಏನು ಮಾಡಿದ್ದಾರೆ ಗೊತಿತಲ್ಲ ಬರೆದುಕೊಟ್ಟ ನಂತರ ನಾವು ಸಲ್ಲಸಿದ್ದೇವೆ. ಕೆಂಪಮ್ಮೇನಿಗೆ ಮಂಜೂರಾದ ಆಸ್ತಿಯನ್ನು ರದ್ದು ಗೊಳಿಸಿದ ಆದೇಶದ ವಿರುದ್ಧ ನಾವು ಇಲ್ಲಿಯವರೆಗೂ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಎಲ್ಲಾ ರವೆನ್ಯೂ ನ್ಯಾಯಾಲಯದಲ್ಲೂ ನಮ್ಮ ಪರ ಆಗಿದೆ ಎಂದು ಸಾಕ್ಷಿ ನುಡಿಯುತ್ತಾರೆ. ಶೀಘ್ರಘತಿ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ನೀಡಿರುತ್ತಾರೆ ಎಂದರೆ ಯಾವುದೇ ತಡೆಯಾಜ್ಞೆ ಇಲ್ಲ ಎನ್ನುತ್ತಾರೆ. ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನೂ ಈಗಲೂ ಜವರೇಗೌಡನೇ ಅನುಭವವಿಸಿಕೊಂಡು ಬರುತ್ತಿರುವುದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜವರೇಗೌಡನ ಆಸ್ತಿ ಸ್ವಾದೀನವನ್ನು ತೊಂದರೆ ಕೊಡುವ ಉದ್ದೇಶದಿಂದ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ ಸಂ. 126/1990 ರ ತೀರ್ಪಿನ ಮೇಲೆ ನಾನು ಯಾವುದೇ ಮೇಲ್ಮನವಿ ಸಲ್ಲಿಸದೇ ಸುಳ್ಳು ಸಂಗತಿಗಳ

ಮೇಲೆ ಈ ದಾವೆ ಸಲಲ್ಲಿಸಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವೆ 126/1990 ರ ಆದೇಶ ನನ್ನನ್ನು ಬದ್ದಪಡಿಸುವುದಾಗಿದ್ದು ನನಗೆ ಈ ದಾವೆಯನ್ನು ಸಲ್ಲಿಸಲು ಅರ್ಹತೆ ಇಲ್ಲ ಹಕ್ಕು ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2 ನೇ ಪ್ರತಿವಾದಿ ಪರ ವಕೀಲರಿಂದಃ**

**2 ನೇ ಪ್ರತಿವಾದಿ ಹಾಗೂ ಅವರ ವಕೀಲರು ಗೈರು ಹಾಜರಿರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ